**<u>ದಿನಾಂಕಃ 13.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ ಸಿ.ಎಂ.ಕೆ. ವಕೀಲರಿಂದಃ</u>**

1) ನನ್ನ ತಾತ ನಿಂಗಯ್ಯನಿಗೆ ಆರು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಆ ಪೈಕಿ ಇಬ್ಬರು ಹೆಣ್ಣು ಮಕ್ಕಳು ಮಾತ್ರ ಜೀವಿತ ಇದ್ದು ಉಳಿದ ಎಲ್ಲರೂ ಮೃತ ಪಟ್ಟಿರುತ್ತಾರೆ. ಮೃತರ ಕುಟುಂಬದ ಸದಸ್ಯರು ಇರುತ್ತಾರೆ. ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಾತನ ಸ್ವತ್ತು ಆಗಿದ್ದ ಕಾರಣ ಉಳಿದವರಿಗೆ ನಾನು ದಾವೆ ಹೂಡುವ ಬಗ್ಗೆ ಕೇಳಲಾಗಿ ಅವರು ನೀವೆ ದಾವೆ ಹಾಡಿ ಆಸ್ತಿ ತೆಗೆದುಕೊಳ್ಳುವಂತೆ ತಿಳಿಸಿದ ಕಾರಣ ನಾನು ಮಾತ್ರ ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತು ನನ್ನ ತಾಯಿಗೆ ಮಾತ್ರ ಸೇರಬೇಕು ಎಂದು ನನ್ನ ತಾತ ಆಗಲೀ ಅಥವಾ ಆತನ ಉಳಿದ ವಾರಸುದಾರರಾಗಲೀ ಯಾವುದೇ ಪತ್ರವನ್ನು ಬರೆದುಕೊಟ್ಟಿಲ್ಲ.

2) ನನ್ನ ತಾತ ನಿಂಗಯ್ಯ ರವರು ಆತನ ಜೀವಿತಾವಧಿಯಲ್ಲಿ ದಾವಾ ಸ್ವತ್ತನ್ನು ವೆಂಕಟಮ್ಮ ರವರಿಗೆ ದಿಃ18.12.1975 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಪರಭಾರೆ ಮಾಡಿದ ಕಾರಣ ನನ್ನ ತಾತ ಮತ್ತು ಆತನ ಇತರೆ ವಾರಸುದಾರರಿಗೆ ಆ ಸ್ವತ್ತಿನ ಮೇಲೆ ಯಾವುದೇ ರೀತಿ ಹಕ್ಕು ಉಳಿದಿರಲಿಲ್ಲ ಎಂದರೆ ಸರಿಯಲ್ಲ. ದಾವೆ ಹೂಡುವ ಕಾಲಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೌಲ್ಯ ಈ ದಾವೆ ಹೂಡುವ ಕಾಲಕ್ಕೆ ಎಷ್ಟು ಇತ್ತು ಎಂದು ನಾವು ವಾದ ಪತ್ರದಲ್ಲಿ ಬರೆದಿರುತ್ತೇವೆ ಎಂದು ನನಗೆ ಗೊತ್ತಿಲ್ಲ.

3) ದಾವಾ ಸ್ವತ್ತು ನನ್ನ ತಾತನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಾತ ದಿಃ 06.07.1936 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ಸ್ವತ್ತನ್ನು ಹೊರತು ಪಡಿಸಿ ಮಂಗಳವಾರ ಪೇಟೆಯಲ್ಲಿ ನನ್ನ ತಾತ ಬೇರೆ ಯಾವುದೇ ನಿವೇಶನವನ್ನು ಹೊಂದಿರಲಿಲ್ಲ. ದಿಃ 06.07.1936 ರ ನೋಂದಾಯಿತ ಕ್ರಯ ಪತ್ರದಲ್ಲಿನ ಚಕ್ಕುಬಂದಿಗೂ ಮತ್ತು ವಾದ ಪತ್ರದಲ್ಲಿನ ಸ್ವತ್ತಿನ ಚಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಿಃ18.12.1975 ರಲ್ಲಿ ನಿಂಗಯ್ಯ ರವರು ವೆಂಕಟಮ್ಮ ರವರಿಗೆ ಸ್ವತ್ತನ್ನು ಮಾರಾಟ ಮಾಡಿದಾಗ ಆ ಪತ್ರದಲ್ಲಿ ಉಲ್ಲೇಖಿಸಿದ ಚಕ್ಕುಬಂದಿಯನ್ನು ವಾದ ಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು

ಒಂದು ಭಾವಚಿತ್ರವನ್ನು ನೋಡಿ ಅದರಲ್ಲಿ ಕಾಂಪೌಂಡ್ ಹಾಕಿರುವ ಒಳಗಡೆ ಕಾಣುವ ಜಾಗವು ತನಗೆ ಸೇರಿದ್ದು ಮತ್ತು ಆ ಸ್ವತ್ತಿನ ಮೇಲೆ ಈ ಪ್ರಕರಣ ದಾಖಲಿಸಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವಾ ಸ್ವತ್ತಿನಲ್ಲಿ ಕಾಂಪೌಂಡ್ ಮತ್ತು ಗೇಟ್ ಅಳವಡಿಸಲಾಗಿದೆ ಎಂದರೆ ಸರಿಯಲ್ಲ.

4) ನನ್ನ ತಾತ ನಿಂಗಯ್ಯನವರ ತಂದೆಯ ಹೆಸರು ದೊಡ್ಡಚನ್ನಯ್ಯ ಎಂದರೆ ಸರಿ. ದಿಃ18.12.1975 ರಲ್ಲಿ ನಿಂಗಯ್ಯರವರಿಂದ ವೆಂಕಟಮ್ಮ ರವರು ಖರೀದಿ ಮಾಡಿದ ಸ್ವತ್ತನ್ನು ಸದರಿ ವೆಂಕಟಮ್ಮ ರವರು ದಿಃ01.07.1989 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ 1ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ01.07.1989 ರಂದು ಮಾಡಲಾದ ನೊಂದಾಯಿತ ಕ್ರಯ ಪತ್ರದಲ್ಲಿ ಡೋರ್ ನಂಬರ್ ತಪ್ಪಾಗಿದ್ದ ಕಾರಣ ಅದನ್ನು ಸರಿಪಡಿಸಿ ಅದನ್ನು ದಿಃ15.12.1990 ರಂದು ಒಂದು ತಿದ್ದುಪಡಿ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 1989 ರಿಂದಲೂ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನ ಹೊಂದಿ ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಬೆಂಗಳೂರಿನಲ್ಲಿ ಸರ್ಕಾರಿ ಕೆಲಸದಲ್ಲಿ ಇದ್ದು ಅಲ್ಲಿಯೇ ತನ್ನ ಕುಟುಂಬದೊಂದಿಗೆ ವಾಸ್ತವ್ಯ ಹೂಡಿದ್ದ ಕಾರಣ ಆತ ದಾವಾ ಸ್ವತ್ತಿನ ಕಂದಾಯ ದಾಖಲೆಗಳನ್ನು ತನ್ನ ಹೆಸರಿಗೆ ಕ್ರಯಪತ್ರದ ಮೇರೆಗೆ ದಾಖಲಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ತದನಂತರ ಪ್ರತಿವಾದಿಗಳು ಸ್ವತ್ತಿನ ಕಂದಾಯ ದಾಖಲೆಯನ್ನು ತಮ್ಮಹೆಸರಿಗೆ ಬದಲಾಯಿಸುವಂತೆ ನಗರಸಭೆಗೆ ಅರ್ಜಿ ನೀಡಿದ ನಂತರ ನನಗೆ ದಾವಾ ಸ್ವತ್ತಿನ ಕಂದಾಯ ದಾಖಲೆ ಇನ್ನೂ ನನ್ನ ತಾತ ನಿಂಗಯ್ಯನ ಹೆಸರಿನಲ್ಲಿ ಇರುವುದಾಗಿ ತಿಳಿದುಬಂದಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಇ.ಸಿ ಯನ್ನು ನಾನು ಪಡೆದು ಪರಿಶೀನಲೆ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಈ ಹಿಂದೆ ಸ್ವತ್ತಿನ ಕುರಿತು ಮಾಡಲಾಗಿರುವ ನೊಂದಾಯಿತ ಕ್ರಯ ಪತ್ರಗಳ ಬಗ್ಗೆ ಉಲ್ಲೇಖಿಸಲಾಗಿದೆ ಎಂದರೆ ಸರಿಯಲ್ಲ. ತದನಂತರ ದಾವಾ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ಅದು ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ವಿಚಾರಣೆ ಮಾಡಿದ್ದಲ್ಲಿ ಸತ್ಯಾಂಶ ತಿಳಿಯುತ್ತದೆ ಎಂಬ ಕಾರಣಕ್ಕಾಗಿ ನಾನು ಆಕೆಯಿಂದ ಅಧಿಕಾರ ಪಡೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿದಂತೆ ಪ್ರತಿವಾದಿಗಳು ಕಂದಾಯ ಪಾವತಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿದಂತೆ ನಾನು ಕಂದಾಯ ಪಾವತಿ ಮಾಡುತ್ತಿರುತ್ತೇನೆ. ಆ ಎಲ್ಲಾ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1985 ರವರೆಗೂ ನನ್ನ

ತಾತ ಮತ್ತು ನನ್ನ ತಂದೆ ಕಂದಾಯ ಪಾವತಿ ಮಾಡಿದ್ದು ತದನಂತರ 1985 ರಿಂದ 2020 ರವರೆಗೂ ನಾನು ಕಂದಾಯ ಪಾವತಿ ಮಾಡಿರುತ್ತೇನೆ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**